## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಪ್ರದೀಪ್ ಪೋತದಾರ,**
**ಬಿ.ಕಾಂ, ಎಲ್.ಎಲ್.ಬಿ.,**

## ಸಿ. ಸಿ. ನಂ.578/2023

ಪಿರ್ಯಾದಿಃ ಶಾಖಾ ವ್ಯವಸ್ಥಾಪಕರು,
ಶ್ರೀ ಗೋಕುಲಂ ಚಿಟ್ ಅಂಡ್ ಫೈನಾನ್ಸ್ ಕಂ.ಲಿ.,
ವಿರಾಜಪೇಟೆ ಶಾಖೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
ಪ್ರತಿನಿಧಿಸುವವರು ಹಾಲಿ
ವ್ಯವಸ್ಥಾಪಕರು,
ಶ್ರೀ ಗಿರೀಶ್ ಕೆ,
ತಂದೆಃ ಗೋವಿಂದ, 45 ವರ್ಷ,
ವಾಸಃ ವಿರಾಜಪೇಟೆ ಪಟ್ಟಣ, ಕೊಡಗು ಜಿಲ್ಲೆ.

**ವಿರುದ್ಧ**

ಆರೋಪಿಃ ಉಬೈದ್ ಸಿ.ಎಂ, ತಂದೆಃ ಅಶ್ರಫ್ ಸಿ.ಎಂ,
ವಾಸಃ ಶಾಫಿ ಜುಮ್ಮಾ ಮಸೀದಿ ಬಳಿ,
ಪೊನ್ನಂಪೇಟೆ ಪಟ್ಟಣ, ಪೊನ್ನಂಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

## ::ಆಪಾದನೆಯ ಸಾರಾಂಶ::

ಏನೆಂದರೆ, ಆರೋಪಿಯಾದ ನೀವು ಪಿರ್ಯಾದಿಯವರ ಸಂಸ್ಥೆಯಿಂದ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲವನ್ನು ಆರೋಪಿಯಾದ ನೀವು ಸರಿಯಾಗಿ ಮರು ಪಾವತಿ ಮಾಡಿರುವುದಿಲ್ಲ. ಸದರಿ ಸಾಲವು ಬಡ್ಡಿ ಸಮೇತ ತೀರಿಸಲು ಆರೋಪಿಯಾದ ನೀವು ಫೆಡರಲ್ ಬ್ಯಾಂಕ್, ಗೋಣಿಕೊಪ್ಪ ಶಾಖೆಯ ಬ್ಯಾಂಕಿನ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್ ನಂಬರ್ 003372, ದಿನಾಂಕಃ 22.04.2023 ರ ಚೆಕ್ ನ್ನು ರೂ.1,89,000/- ನೀಡಿದ್ದು,

ಪಿರ್ಯಾದಿ ಸಂಸ್ಥೆಯವರು ಸದರಿ ಚೆಕ್ ಅನ್ನು ನಗದೀಕರಿಸುವ ಸಲುವಾಗಿ ಕರ್ನಾಟಕ ಬ್ಯಾಂಕ್ ಲಿ., ವಿರಾಜಪೇಟೆ ಶಾಖೆ ಮುಖಾಂತರ ಸಲ್ಲಿಸಿದಾಗ, ಸದರಿ ಚೆಕ್ "**Funds insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 25.04.2023 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿ ಬಂದಿರುತ್ತದೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 11.05.2023 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್ ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ Yes.

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ Accused pleaded not guilty and claimed to be tried.

(ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ.)

ಸಹಿಃ

(ಪ್ರದೀಪ್ ಪೋತದಾರ)

ದಿನಾಂಕಃ 21.11.2025 ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,

ವಿರಾಜಪೇಟೆ.